ಮೊದಲ ಆಯ್ಕೆ ಎಂದು ನೀವು ಭಾವಿಸಬಹುದು. ಆದರೆ ಈಗೀಗ ನನಗೆ ಅನಿಸುತ್ತಿದೆ, ನನ್ನ ಮೊದಲ ಆಯ್ಕೆ ಸಾಹಿತ್ಯವೇ ಆಗಿದೆ. ಯಾಕೆಂದರೆ ವಿಸ್ತಾರವಾದ ಓದು ಇದ್ದಾಗಲಷ್ಟೇ ನೃತ್ಯದ ಅಪಾರ ಸಾಧ್ಯತೆಗಳನ್ನು ಅನ್ವೇಷಿಸುತ್ತ ಸಾಗಬಹುದು. ನಾನು ನೃತ್ಯಕ್ಕೆ ನಿಷ್ಠಳಾಗಿ ಇರಬೇಕಾದರೆ ಸಾಹಿತ್ಯದ ತಳಹದಿ ಬೇಕಾಗುತ್ತದೆ. ಒಳ್ಳೆಯ ಸಾಹಿತ್ಯ ಓದಿದಾಗ ಅದನ್ನು ನಾನು ಹೇಗೆ ಪ್ರಸ್ತುತಪಡಿಸಬಹುದು ಎಂದು ಆಲೋಚಿಸುತ್ತಿರುತ್ತೇನೆ. ಅದರ ಅಭಿವ್ಯಕ್ತಿ ಶಕ್ತಿಯು ಎಷ್ಟರಮಟ್ಟಿಗೆ ಇದೆ ಎಂದು ಚಿಂತಿಸುತ್ತೇನೆ. ಹೀಗೆ ಸಾವಿರಾರು ಪುಸ್ತಕಗಳು ನನ್ನನ್ನು ಬೆಳೆಸಿವೆ. ನಾನು ಮಹಾಕವಿ ಕಾಳಿದಾಸನ ದೊಡ್ಡ ಅಭಿಮಾನಿ ಕಲಾವಿದೆ. ಅವನು ಬರೆದ ಸುಂದರ ಕಾವ್ಯಗಳಾದ 'ಮೇಘದೂತಂ' ಮತ್ತು 'ಕುಮಾರಸಂಭವಂ' ಅನ್ನು ಪ್ರೀತಿಸದೇ ಹೇಗಿರಲಿ. ಜಯದೇವ ಕವಿಯ 'ಗೀತಗೋವಿಂದಂ' ಕುರಿತು ವಿಸ್ತೃತವಾದ ಅಧ್ಯಯನ ಮಾಡಿರುವೆ. ನೃತ್ಯಗಳನ್ನು ಪ್ರಸ್ತುತಪಡಿಸಿರುವೆ. ನನ್ನದೇ ಆದ ಅಭಿವ್ಯಕ್ತಿಯನ್ನು ಅನ್ವಯಿಸಿ ನೃತ್ಯವನ್ನು ರೂಪಿಸಿರುವೆ. ಅಣ್ಣಮಾಚಾರ್ಯರ ಶೃಂಗಾರ ಸಂಕೀರ್ತನೆಗಳ ಕುರಿತೇ ನಾನು ಪಿಎಚ್.ಡಿ ಮಾಡಿರುವೆ. ಅಣ್ಣಮಾಚಾರ್ಯರು ಬರೆದ ಸುಮಾರು 13,000 ಹಾಡುಗಳಿವೆ. ಅವುಗಳನ್ನು ಓದುತ್ತ, ಅಧ್ಯಯನಕ್ಕೆ ಬೇಕಾದ ಮಾಹಿತಿ ಪಡೆಯುತ್ತ ದೀರ್ಘ ಕಾಲ ಸವೆಸಿರುವೆ. ಹಾಗೆ ನೋಡಿದರೆ ನಾನು ಹಿಂದಿ, ಸಂಸ್ಕೃತ, ತೆಲುಗು, ಬ್ರಜ್ ಭಾಷಾ, ಮೈಥಿಲಿ, ಅವಧಿ ಭಾಷೆಯ ಸಾಹಿತ್ಯಗಳನ್ನು ಹುಡುಕಿ ಓದಿರುವೆ. ಅವೆಲ್ಲ ನನ್ನ ಸಂಶೋಧನೆಗೆ ಅಂತರ್ಜಲವನ್ನು ಕೊಟ್ಟಿವೆ. ಇತ್ತೀಚೆಗಿನ ಹಿಂದಿ ಕವಿಗಳಾದ ಜಯಶಂಕರ ಪ್ರಸಾದ್, ಸುಮಿತ್ರಾನಂದನ್ ಪಂತ್, ಮೈಥಿಲಿ ಶರಣ್ ಗುಪ್ತಾ ಮುಂತಾದವರು ಎಷ್ಟು ಸುಂದರವಾಗಿ ಬರೆಯುತ್ತಿದ್ದಾರೆ. ಸಮಕಾಲೀನ ತೆಲುಗು ಸಾಹಿತ್ಯವನ್ನು ಹೆಚ್ಚು ಓದಿಲ್ಲ ನಾನು. ಸೂರ್‌ದಾಸ್ ಸಾಹಿತ್ಯ, ವಿದ್ಯಾಪತಿಯ 'ಪದಾವಲಿ', ತುಳಸೀದಾಸರ 'ರಾಮಚರಿತ ಮಾನಸ', ಹೀಗೆ ಓದಿಗೆ ಮಿತಿಯಿಲ್ಲ.

◆ **ನೃತ್ಯವು ಸಾಮಾಜಿಕ ಪರಿವರ್ತನೆ ತರಬಲ್ಲುದು ಎಂದು ನಂಬುತ್ತೀರಾ?**

ಪರಿವರ್ತನೆಯು ತೀರಾ ನೇರವಾಗಿ ಅಥವಾ ತಾರ್ಕಿಕವಾಗಿ ಇರಬೇಕು ಎಂದೇನಿಲ್ಲ. ನೃತ್ಯವು

